<u>1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.</u>

<u>Spl.KPTCL.434/2022</u>

PW- 03

ಪ್ರ. ಬೋ. ದಿನಾಂಕಃ 20-01-2024

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಸಿ ಆರ್ ಬಸವರಾಜ್ |
| ತಂದೆ/ಗಂಡನ ಹೆಸರು | : | ಸಿ ರಾಮರೆಡ್ಡಿ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ಎಎಸ್ಐ , ನ್ಯಾಮತಿ ಪೊಲೀಸ್ ಠಾಣೆ |
| ವಾಸ | : | ನ್ಯಾಮತಿ |

<u>ದಂಡ ಪ್ರಕ್ರಿಯಾ ಸಂಹಿತೆ ಕಲಂ.299 ರ ಅಡಿಯಲ್ಲಿ ಸಾಕ್ಷಿಯ ವಿಚಾರಣೆಃ</u>

<u>ಮುಖ್ಯ ವಿಚಾರಣೆಃ</u> ಮಾನ್ಯ ಸರ್ಕಾರಿ ಅಭಿಯೋಜಕರಿಂದ.

2020 ರಿಂದ ಇಲ್ಲಿಯವರೆಗೆ ನಾನು ನ್ಯಾಮತಿ ಪೊಲೀಸ್ ಠಾಣೆಯಲ್ಲಿ ಎಎಸ್.ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಈ ನ್ಯಾಯಾಲಯದ ಆದೇಶದಂತೆ ದಿ.26-12-2022 ರಂದು ಆರೋಪಿಯ ವಿಳಾಸಕ್ಕೆ ಹೋಗಿ, ಆತನ ಬಗ್ಗೆ ವಿಚಾರಿಸಲಾಗಿ , ಆತ ಪತ್ತೆಯಾಗಿರುವುದಿಲ್ಲ. ಸ್ಥಳೀಯ ಪೊಲೀಸರ ಸಹಕಾರದೊಂದಿಗೆ ಸ್ಥಳದಲ್ಲಿ ಮಹಜರ್ ಬರೆದು, ಉದ್ಘೋಷಣೆ ಹೊರಡಿಸಿ, ನಂತರ ಉದ್ಘೋಷಣೆಯ ಪ್ರತಿಯನ್ನು ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣ ಹಾಗೂ ಆರೋಪಿಯ ಮನೆಯ ಮುಂದೆ ಅಂಟಿಸಿರುತ್ತೇನೆ.

ಸಾಕ್ಷಿ ಮಹಜರ್ ನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ಮಹಜರನ್ನು ನಿಪಿ.4 ಎಂದು , ಸಾಕ್ಷಿಯ ಸಹಿಯನ್ನು ನಿಪಿ.4(ಎ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ತೆಗೆದ ಮೂರು ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ.5 ರಿಂದ 7 ಎಂದು ಗುರುತಿಸಲಾಯಿತು.

ನಂತರ ಭದ್ರಾವತಿ ತಾಲ್ಲೂಕು ಕಛೇರಿಗೆ ಭೇಟಿಕೊಟ್ಟು ಆರೋಪಿಯ ಹೆಸರಿನಲ್ಲಿ ಯಾವುದೇ ಚರಾಸ್ತಿ ಮತ್ತು ಸ್ಥಿರಾಸ್ತಿ ಇರುವುದಿಲ್ಲ ಎಂದು ದಾಖಲೆಯನ್ನು ಪಡೆದಿರುತ್ತೇನೆ. ಅದನ್ನು ನೋಡುತ್ತಿದ್ದು, ನಿಪಿ.8 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ</u>- ಆರೋಪಿ ತಲೆಮರಿಸಿಕೊಂಡಿರುವುದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

Spl.KPTCL.434/2022

PW- 02

CW- 22

ಪ್ರ. ಬೋ. ದಿನಾಂಕಃ 17-08-2023

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ದೇವರಾಯ |
| ತಂದೆ/ಗಂಡನ ಹೆಸರು | : | ಜಿ ನಾರಾಯಣ |
| ವಯಸ್ಸು | : | 59 ವರ್ಷ |
| ಉದ್ಯೋಗ | : | ಪಿಎಸ್ಐ ಸಿ ಇ ಎನ್ ಪೊಲೀಸ್ ಠಾಣೆ |
| ವಾಸ | : | ಶಿವಮೊಗ್ಗ |

ದಂಡ ಪ್ರಕ್ರಿಯಾ ಸಂಹಿತೆ ಕಲಂ.299 ರ ಅಡಿಯಲ್ಲಿ ಸಾಕ್ಷಿಯ ವಿಚಾರಣೆಃ

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ದಿ.01-01-2012 ರಿಂದ 18-05-2013 ರ ವರೆಗೆ ನ್ಯಾಮತಿ ಪಿಎಸ್ಐ ಅಂತ ಕರ್ತವ್ಯ ನಿರ್ವಹಿಸುತ್ತಿದ್ದೆ.

ದಿ.13-11-2012 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಬೆಳಿಗ್ಗೆ 11-00 ಗಂಟೆಸುಮಾರಿಗೆ ಚಾಸಾ-1 ರವರು ನೀಡಿದ ಲಿಖಿತ ದೂರನ್ನು ಪಡೆದು ಠಾಣಾ ಗುನ್ನಾ ನಂ.215/12 ರಂತೆ ಪ್ರಕರಣ ದಾಖಲು ಮಾಡಿ , ಪ್ರ.ವ.ವರದಿ ಮತ್ತು ದೂರನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ.

ದೂರಿನ ದೃಢೀಕೃತ ನಕಲನ್ನು ನೋಡುತ್ತಿದ್ದು , ಅದನ್ನು ಈಗಾಗಲೇ ನಿಪಿ.1 ಎಂದು ಗುರುತಿಸಲಾಗಿದೆ.

ದಿ.14-11-2012 ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟ್ಟಿ ಕೊಟ್ಟು ಫಿರ್ಯಾದಿ ತೋರಿಸಿದ ಸ್ಥಳದಲ್ಲಿ ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿರುತ್ತೇನೆ.

ಸಾಕ್ಷಿ ಮಹಜರ್ ನ ದೃಢೀಕೃತ ನಕಲು ನೋಡಿ ಗುರುತಿಸಿದ್ದು , ಮಹಜರನ್ನು ನಿಪಿ.2 ಎಂದು ಗುರುತಿಸಲಾಯಿತು. ಪ್ರ.ವ. ವರದಿಯನ್ನು ನೋಡುತ್ತಿದ್ದು , ಅದರ ದೃಢೀಕೃತ ಪ್ರತಿನ್ನು ನಿಪಿ.3 ಎಂದು ಗುರುತಿಸಲಾಯಿತು.

ನಂತರ ಈ ಕೇಸಿನ ಕಡತವನ್ನು ಎಎಸ್‌ಐ ಸಿದ್ದರಾಮಪ್ಪ ರವರಿಗೆ ವಹಿಸಿರುತ್ತೇನೆ. ಆ ನಂತರ ಕಡತವನ್ನು ಪುನಃ ಪಡೆದು ಪರಿಶೀಲಿಸಿ , ದೋಷಾರೋಣಪ ಪಟ್ಟಿಸಲ್ಲಿಸಿರುತ್ತೇನೆ.

<u>ಪಾಟೀ ಸವಾಲುಃ</u>– ಆರೋಪಿ ತಲೆಮರಿಸಿಕೊಂಡಿರುವುದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.